ಚರ್ಚೆ ಆದ ದಿನಾಂಕ: 29.3.2022 118 ನಿ.330

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ, ಶ್ರೀ ಎಸ್. ಎ. ಬೋಜೇಗೌಡ, ಡಾ|| ಕೆ. ಗೋವಿಂದರಾಜ್, ಶ್ರೀ ಬಿ. ಕೆ. ಹರಿಪ್ರಸಾದ್ ಹಾಗೂ ಶ್ರೀ ಕೆ. ಪ್ರತಾಪಸಿಂಹ ನಾಯಕ್ ಇವರುಗಳು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆ ಸಂಖ್ಯೆ: 118ಕ್ಕೆ ಉತ್ತರ.**

**ಪ್ರಶ್ನೆ:**

ಗ್ರಾಮೀಣ ಕ್ರೀಡೆಯಾದ ಕಂಬಳವು ರಾಜ್ಯದ ಕರಾವಳಿ ಭಾಗದಲ್ಲಿ ಶತಶತಮಾನಗಳಿಂದ ತನ್ನದೇ ಆದ ಐತಿಹಾಸಿಕ ನೆಲೆಯನ್ನು ಹಾಗೂ ಪಾರಂಪಾರಿಕ ವೈಶಿಷ್ಟ್ಯವನ್ನು ಹೊಂದಿದೆ. ಕರಾವಳಿ ಭಾಗದಲ್ಲಿ ಸುಮಾರು 200 ಸಾಂಪ್ರದಾಯಿಕ ಮತ್ತು ಸುಮಾರು 20 ಅಧಿಕೃತ ಕಂಬಳಗಳು ನಡೆಯುತ್ತಿದ್ದು, ಇದು ಹೆಚ್ಚಾಗಿ ನವೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ನಡೆಯುತ್ತದೆ. ಶನಿವಾರ ಮತ್ತು ಭಾನುವಾರ ಈ 2 ದಿನಗಳಲ್ಲಿ 48 ಗಂಟೆಗಳು ನಿರಂತರವಾಗಿ ಈ ಕ್ರೀಡೆಯು ನಡೆಯುತ್ತದೆ. ಈ ಕಂಬಳ ಕ್ರೀಡೆಯನ್ನು ವೀಕ್ಷಿಸಲು ಕರಾವಳಿ ಭಾಗದ ದೂರ ದೂರ ಪ್ರದೇಶಗಳಿಂದ ಲಕ್ಷಾಂತರ ಕಂಬಳ ಅಭಿಮಾನಿಗಳು ಕಂಬಳ ಗದ್ದೆಯ ಬಳಿ ಸೇರಿ ಕಂಬಳ ಕ್ರೀಡೆಯ ಮನೋಹರ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾರೆ.

ಆದರೆ, ಜಾನಪದ ಕ್ರೀಡೆಯಾದ ಕಂಬಳ ಕ್ಷೇತ್ರಕ್ಕೆ ಇಂದು ಸರಿಯಾದ ಸೌಲಭ್ಯ ಸಿಗದೇ ಇರುವುದರಿಂದ ಈ ಜಾನಪದ ಕ್ರೀಡೆ ಕಣ್ಮರೆಯಾಗುವುದೋ ಎಂಬ ಆತಂಕವು ಇದನ್ನು ನಂಬಿ ಬದುಕುವ ವರ್ಗಕ್ಕೂ ಕಂಬಳ ಅಭಿಮಾನಿಗಳಿಗೂ ಉಂಟಾಗಿದೆ. ಈ ಕ್ರೀಡೆಗೆ ಸರಿಯಾದ ಪ್ರೋತ್ಸಾಹವಿಲ್ಲದೇ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿ ಇರುವ ವಿಚಾರವನ್ನು ನಿಯಮ 330 ರ ಅಡಿಯಲ್ಲಿ ಸದನದಲ್ಲಿ ಚರ್ಚಿಸಲು ಅನುಮತಿಯನ್ನು ಕೋರುತ್ತೇವೆ.

**ಉತ್ತರ:**

ಕರ್ನಾಟಕದ ಕರಾವಳಿ ಭಾಗದ ಪ್ರಸಿದ್ಧ ಜಾನಪದ ಕ್ರೀಡೆಯಾದ ಕಂಬಳದ ಬಗ್ಗೆ ಸರ್ಕಾರ ವಿಶೇಷ ಆದ್ಯತೆಯನ್ನು ನೀಡಿದೆ.

ಗ್ರಾಮೀಣ ಮತ್ತು ಜಾನಪದ ವಿಶಿಷ್ಟ ಕ್ರೀಡೆಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು 2014-15ನೇ ಸಾಲಿನಿಂದ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿಯನ್ನು ಪ್ರಾರಂಭಿಸಿದ್ದು, ಇದರಲ್ಲಿ ಗ್ರಾಮೀಣ ಕ್ರೀಡೆಯಾದ ಕಂಬಳ ಕ್ರೀಡೆಯಲ್ಲಿ ಕೋಣಗಳನ್ನು ಓಡಿಸುವ ಓಟಗಾರರಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾಧಕ ಕ್ರೀಡಾಪಟುಗಳನ್ನು ಗುರುತಿಸಿ ಪ್ರತಿ ವರ್ಷ ಒಬ್ಬರಿಗೆ ರೂ 1.00 ಲಕ್ಷ ನಗದು ಪುರಸ್ಕಾರ ಮತ್ತು ಸ್ಮರಣಿಕೆಗಳನ್ನೊಳಗೊಂಡ **'ಕರ್ನಾಟಕ ಕ್ರೀಡಾ ರತ್ನ'** ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಇಲ್ಲಿಯವರೆಗೆ 10 ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಿದ್ದು, ವಿವರ ಕೆಳಕಂಡಂತಿದೆ:-

1) ಪಲಿಮಾರು ದೇವೇಂದ್ರ ಕೋಟ್ಯಾನ್-2014
2) ಜಯಕರ ಯಾನೆ ನಕ್ರೆ ಜಯಕರ-2014
3) ಕೊಳಚೂರು ಕೊಂಡಟ್ಟು ಸುಕುಮಾರ ಶೆಟ್ಟಿ-2014
4) ಜೀವನ್ ಧರ್ ಬಳ್ಳಾಳ್-2015
5) ಆನಂದ್ ಇರುವತ್ತೂರ್-2015
6) ಯುವರಾಜ್ ಜೈನ್-2016
7) ಗೋಪಾಲಕೃಷ್ಣ ಪ್ರಭು-2017
8) ಶ್ರೀನಿವಾಸಗೌಡ-2017
9) ಸುರೇಶ್ ಶೆಟ್ಟಿ-2018
10) ಪ್ರವೀಣ್ ಕೆ-2019

--2)

ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಸಂಸ್ಥೆಗಳನ್ನು ಗುರುತಿಸಿ, ಸರ್ಕಾರವು ರೂ.5.00 ಲಕ್ಷಗಳ ನಗದು ಪುರಸ್ಕಾರ ಮತ್ತು ಸ್ಮರಣಿಕೆಯನ್ನು ಒಳಗೊಂಡ '**ಕ್ರೀಡಾ ಪೋಷಕ**' ಪ್ರಶಸ್ತಿಯನ್ನು ನೀಡುತ್ತಿದೆ. ಕಂಬಳ ಕ್ರೀಡೆಯ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ (ರಿ), ಕಾರ್ಕಳ, ಉಡುಪಿ ಜಿಲ್ಲೆ ಸಂಸ್ಥೆಗೆ 2017-18 ನೇ ಸಾಲಿನಲ್ಲಿ '**ಕ್ರೀಡಾ ಪೋಷಕ**' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರಾವಳಿ ಕರ್ನಾಟಕದ ಜಾನಪದ ಕ್ರೀಡೆ ಕಂಬಳಕ್ಕೆ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಹಭಾಗಿತ್ವ ಮತ್ತು ಸಹಕಾರದೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯ '**ವೀರ ರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ**'ದಲ್ಲಿ 10 ಎಕರೆ ಜಾಗದಲ್ಲಿ '**ಕೋಟಿ-ಚೆನ್ನಯ್ಯ**' ಹೆಸರಿನ ಜೋಡುಕರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಮುಂದುವರೆದು, **ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ** 5 ಎಕರೆ ನಿವೇಶನದಲ್ಲಿ '**ಲವ-ಕುಶ**' ಹೆಸರಿನ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ.

2019-20ನೇ ಸಾಲಿನಲ್ಲಿ ಮೂಡುಬಿದ್ರೆಯಲ್ಲಿ ಆಯೋಜಿಸಲಾದ '**ಕೋಟಿ-ಚೆನ್ನಯ್ಯ**' ಜೋಡುಕರೆ ಕಂಬಳಕ್ಕೆ ರೂ.5.00 ಲಕ್ಷಗಳ ಅನುದಾನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ.

ಒಟ್ಟಾರೆ, ಕಂಬಳ ಕ್ರೀಡೆಗೆ ಸರ್ಕಾರವು ಅಗತ್ಯ ಸಹಾಯ, ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡುತ್ತಿದೆ.

**ವೈಎಸ್‌ಡಿ/ಇವೈಡಬ್ಲ್ಯೂ/91/2022**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.